ದಿನಾಂಕಃ 05.03.2026

ಅಸಲುದಾವೆ: 165/2024

ಪಿ.ಡಬ್ಲ್ಯೂ: 1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿವರೆಗೆ ಓದಿರುತ್ತೇನೆ. ಪ್ರತಿವಾದಿಗಳು ನಿಮಗೆ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ಕೃಷ್ಣೇಗೌಡರ ಮಗ ಅಕ್ಷಯ್ ಕುಮಾರ್ ಒಬ್ಬರು ಗೊತ್ತು ಎಂದು ಉತ್ತರಿಸುತ್ತಾರೆ. ನಾನು ವ್ಯಾಪಾರ ಮತ್ತು ವ್ಯವಸಾಯ ಮಾಡುತ್ತಿದ್ದೇನೆ. ನಾನು ದಿನಸಿ ಅಂಗಡಿ ನಡೆಸುತ್ತಿದ್ದೇನೆ. ನನಗೆ ಶಿವಪುರದಲ್ಲಿ 17 ಗುಂಟೆ ಜಮೀನು ಇರುತ್ತದೆ. ಕೃಷ್ಣೇಗೌಡರ ಮಗ ಅಕ್ಷಯ್ ಕುಮಾರ್ ನಮ್ಮ ದಿನಸಿ ಅಂಗಡಿಗೆ ಬರುತ್ತಿದ್ದರು ಹಾಗಾಗಿ ಪರಿಚಯ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವ ಜಮೀನು ನೀರಾವರಿ ಜಮೀನಾಗಿರುತ್ತದೆ. ನಾನು ನೋಡಿದ ಸಮಯದಲ್ಲಿ ದಾವ ಜಮೀನಿನಲ್ಲಿ ಕಬ್ಬು ಇತ್ತು. ನಾನು ವಾಸವಿರುವ ಸ್ಥಳದಲ್ಲಿ ದಾವ ಜಮೀನು 5 ಕಿ.ಮೀ ದೂರವಿರುತ್ತದೆ. ಸದರಿ ಜಮೀನನ್ನು ಮಾರಾಟ ಮಾಡುವುದಾಗಿ ನಿಮಗೆ ಯಾರು ತಿಳಿಸಿದರು ಎಂದರೆ ಸಾಕ್ಷಿ ಕೃಷ್ಣೇಗೌಡರ ಮಗ ಅಕ್ಷಯ್ ಕುಮಾರ್ ಎಂದು ಉತ್ತರಿಸುತ್ತಾರೆ. ದಾವ ಜಮೀನು ಕೃಷ್ಣೇಗೌಡರಿಗೆ ಹೇಗೆ ಬಂದಿರುತ್ತದೆ ಎಂದು ವಿಚಾರ ಮಾಡಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಪಿರ್ತಾರ್ಜಿತವಾಗಿ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ಪಿರ್ತಾರ್ಜಿತವಾಗಿ ಬಂದಿದೆ ಎಂದು ಯಾವ ದಾಖಾತಿಲಾತಿಯನ್ನು ನೋಡಿ ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ ಎಂ.ಆರ್ ಮತ್ತು ಆರ್.ಟಿ.ಸಿ ಹಾಗೂ ವಂಶವೃಕ್ಷ ನೋಡಿ ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಕೃಷ್ಣೇಗೌಡರ ತಂದೆಯ ಹೆಸರು ತಿಮ್ಮೇಗೌಡ. ಸದರಿ ತಿಮ್ಮೇಗೌಡರಿಗೆ ಇಬ್ಬರು ಮಕ್ಕಳು. ಆ ಇಬ್ಬರು ಮಕ್ಕಳಿಗೆ ವಿಭಾಗ ಆಗಿರುವ ಬಗ್ಗೆ ಯಾವುದಾದರು ದಾಖಲಾತಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಕೃಷ್ಣೇಗೌಡರಿಗೆ ಎಷ್ಟು ಎಕರೆ ಜಮೀನುಗಳು ಇವೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ಕ್ರಯಕ್ಕೆ ಕೊಟ್ಟಿರುವ 1 ಎಕರೆ ಬಿಟ್ಟು ಅದರ ಉಳಿಕೆ ಜಮೀನು ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,

ಮದ್ದೂರು.